(ಇಂದು ದಿಃ 09-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)
**ಪಾಟೀ ಸವಾಲು :- ಶ್ರೀ.NY ವಕೀಲರಿಂದ :-**

ವಾದಿ ನನಗೆ 1979 ರಿಂದ ಪರಿಚಯ. ಅಂದಿನಿಂದ ಇಬ್ಬರು ಸ್ನೇಹಿತರು. ಕಳೆದ 20 ವರ್ಷಗಳಿಂದ ವಾದಿ ಮತ್ತು ನನ್ನ ನಡುವೆ ಸಂಪರ್ಕ ಇಲ್ಲ. ನನಗೆ ವಾದಿ ಕುಟುಂಬದ ಬಗ್ಗೆ ಸಂಪೂರ್ಣವಾಗಿ ಗೊತ್ತಿಲ್ಲ. 1979-80 ರಲ್ಲಿ ವಾದಿ ನನ್ನ ಜೊತೆ ಇರುತ್ತಿದ್ದರು. ನಾನು 1979 ರಿಂದ 83 ರವರೆಗ ವೈನಶಾಪ ನಡೇಸುತ್ತಿದ್ದೆ. 1983 ರಿಂದ ವೈನಶಪ ಬಂದಾಗಿದೆ. 1983 ರಿಂದ ನನಗೆ ವಾದಿಗೆ ಸಂಬಂಧ ಇಲ್ಲ ಎಂದರೆ ಸರಿ. ವಾದಿ ನನ್ನ ಜೊತೆ ಪಾಲುದಾರಿಕೆಯಲ್ಲ್ದ ಎಂದು ತೋರಿಸಲು ಪಾಲುದಾರಿಕೆ ಪತ್ರ ಹಾಜರುಪಡಿಸಿಲ್ಲ. ವೈನ್ಸ ಲೈಸೆನ್ಸ ಇತ್ತು. ಲೈಸೆನ್ಸ ಒಬ್ಬ ವೆಂಕಟರಾಮ ರವರ ಹೆಸರಿನಲ್ಲಿತ್ತು. ಸದರಿ ವೆಂಕಟರಾಮು ಕೂಡ ನಮ್ಮ ಜೊತೆ ಪಾಲುದಾರಿಕೆಯಲ್ಲಿದ್ದರು. ವಾದಿಯ ಅಣ್ಣ ಬುಗ್ಗಯ್ಯ ನಾರಾಯಣ ಪೇಟೆಯಲ್ಲಿ ಶೆಂದಿ ಮಾರಾಟ ವ್ಯವಹಾರದಲ್ಲಿದ್ದರು ಎಂದರೆ ಸರಿ. ಬುಗ್ಗಯ್ಯ ನಿಂಗಯ್ಯ ಮಹರಾಜರ ಬಳಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಸುಮಾರು 30-40 ವರ್ಷಗಳಿಂದ ಅವರ ಬಳಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಶೇಂದಿ ಮಾರಾಟದ ಸಂಪೂರ್ಣ ಹಣ ಬುಗ್ಗಪ್ಪನ ಬಳಿ ಇರುತ್ತಿತ್ತು ಎಂದರೆ ನನಗೆ ಗೊತಿತಲ್ಲ. ಬುಗಯ್ಯನ ಜೊತೆ ಯಾನಗುಂದಿ ಕರಿಮ ಸಾಬ ಮೊತಕಪಲ್ಲಿ ಬಸವರಾಜ ಮತ್ತು ಇಟಕಲನ ಸತ್ಯಯವರು ಸೇರಿ ಶೇಂದಿ ಮಾರಾಟವ್ಯ ವಹಾರ ನಡೆಸುತ್ತಿದ್ದರು ಎಂದರೆ ಸರಿ. ವಾದಿ ಮತ್ತು ಬುಗಯ್ಯ 40 ವರ್ಷಗಳ ಹಿಂದೆ

ಬೇರೆಯಾಗಿದ್ದಾರೆ ಎಂದರೆ ಸರಿಯಲ್ಲ. ನನಗೆ 1978 ರವರೆಗೆ ಅವರ ಕುಟುಂಬದ ಬಗ್ಗೆ ಗೊತ್ತಿತ್ತು ಇವತ್ತಿನ ಬಗೆ ಮಾಹಿತಿ ಇಲ್ಲ. 1978 ರಿಂದ ಇಚೇರಗೆ ಅವರ ನಡುವೆ ಆದ ವ್ಯವಹಾರದ ಬಗಗೆ ನನಗೆ ಗೊತಿಲ್ಲ.

ನನಗೆ ವಾದಿಯ 2ನೇ ಹೆಂಡತಿ ಗೊತ್ತಿಲ್ಲ. ವಾದಿಯ 2ನೇ ಹೆಂಡತಿ ನನ್ನ ಸಂಬಂಧಿ ಎಂದರೆ ಸರಿಯಲ್ಲ. ಆ ಕಾರಣ ನಾನು ವಾದಿಯ ಮಾತು ಕೇಳಿಕೊಂಡು ಆತನಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನನ್ನ ಜೊತೆ ವೈನ್ಸ ಪಾಲುದಾರಿಕೆಯಲ್ಲಿದ್ದ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಪಾಲು ದಾರಿಯಲ್ಲಿದ್ದಾಗ ಯಾರು ಯಾರಿಗೆ ಎಷ್ಟು ಆದಾಯ ಬರುತ್ತಿತ್ತು ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ಆಗಾಗ ಬುಗಯ್ಯ ಬಂದು ಹಣ ತೆಗೆದುಕೊಂಡು ಹೋಗುತ್ತಿದ್ದರು ಎಂದು ಹೇಳುತ್ತಾರೆ. ಬುಗಯ್ಯ ಯಾವ ಯಾವ ದಿನಾಂಕಗಳಂದು ಬಂದು ಎಷ್ಟು ಹಣ ತೆಗೆದುಕೊಂಡು ಹೋಗಿದ್ದಾರೆ ಹೇಳಲು ಆಗುವುದಿಲ್ಲ. ಹಣ ಕೊಟ್ಟ ಬಗ್ಗೆ ರಶೀದಿ ಪಡೆದುಕೊಂಡಿಲ್ಲ. ಬುಗಯ್ಯ ಯಾವತ್ತು ನಮ್ಮ ಬಳಿ ಬಂದಿಲ್ಲ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಬುಗಯ್ಯ ಸ್ವಂತ ವ್ಯವಹಾರ ಮಾಡಿಕೊಂಡು ಆರ್ಥಕವಾಗಿ ಚೆನ್ನಾ ಗಿದ್ದರು ಎಂದರೆ ಸರಿಯಲ್ಲ. ಬುಗಯ್ಯ ಆಸ್ತಿಗಳಿಗೆ ವಾದಿ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ವಾದಿ ಮತ್ತು ಬುಗಯ್ಯ ಬೇರೆಯಾಗಿ 30-40 ವರ್ಷಗಳಾಗಿದ್ದು ಅಂದಿನಿಂದ ಅವರಿಬ್ಬರು ಅವರವರ ಭಾಗಗಳಿಗೆ ಬಂದ ಸ್ವತ್ತುಗಳಲ್ಲಿ ಪ್ರತ್ಯೇಕವಾಗಿ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನು ವಾದಿ ಮಾತು ಕೇಳಿಕೊಯಿ ಸುಳ್ಳು ಪ್ರಮವಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**(3ನೇ ಪ್ರತಿವಾದಿ ಪರ ಶ್ರೀ RM ವಕಿಲರು ಮೇಲಿನ ವಾಟೀ ಸವಾಲನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು ನೀಡಲಾಯಿತು)**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**